ಮೈಸೂರ ಗೆಜೆಟ್ಟ.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ॥ 15, ಸ್ಟ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಇಸ್ತಿಹಾರ್‌ಗಳು.

ಫಾರೆಸ್ಟ್ ಇಲಾಖಾ.

ತಾರೀಖು 29ನೇ. ನವಂಬರ್ 1875.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕೊಡಗಿನಲ್ಲಿ ಉತ್ಪತ್ತಿಯಾದ ಸುಮಾರು ಯಂಭತ್ತು ಟ್ಯಗಳ ಸಂದಲ್ ಮರವನ್ನು ಸ್ಟ 1876ನೇ ಇಸವಿ ಜನವರೀ 17ನೇ ತಾರೀಖಿನಲ್ಲಿ ಫ್ರೇಜರ್‌ಪೇಟೆ ಸಂದಲ್ ಕೋಠೀಯೊಳಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜು ನಿಬಂಧನೆಗಳು,—ಸ್ಟ 1874ನೇ ಇಸವಿ ಡಿಸಂಬರ್ 5ನೇ ತಾರೀಖು 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುವ ಮೇರೆ ಯಿರತಕ್ಕದ್ದು. ಹರಾಜಿನಲ್ಲಿ ಕೊಂಡ ಮರಕ್ಕೆ ಹಣ ಪಾವತೀ ಮಾಡತಕ್ಕ್ಕವಾಯಿದೇಯೂ ಸ್ಟ 1876ನೇ ಮಾರ್ಚೀ 21ಕ್ಕೆ ಆಖೈರಾಗುತ್ತೆಯಾಗಿ ಆ ತಾರೀಖಿನ ವಳಗಾಗಿ ಹಣವನ್ನೆಲ್ಲ ಪಾವತೀ ಮಾಡತಕ್ಕದ್ದು. ಯಿದಕ್ಕೆ ತಪ್ಪಿದರೆ ಜುರ್ಮಾನೆಗಳು ವಿಧಿಸಲ್ಪಡುವವು.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಚ್ಚು ಕಡಮೆ ಷುಮಾರ್ 24 ಟ್ಯಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫಿಬ್ರವರೀ 15ನೇ ಮಂಗಳವಾರ ಕೋಠೀಯೊಳಗೆ $18\frac{1}{2}$ ಟ್ಯಗಳು. ಬಗರ್ ಅದದ್.

1876ನೇ ಫಿಬ್ರವರೀ 24ನೇ ಗುರುವಾರ ಕವಲೀದುರ್ಗ ಕೋಠೀಯಲ್ಲಿ $5\frac{1}{2}$ ಟ್ಯಗಳು. ಚಕ್ಕೆವ ಬುಕಣಿ.

ಹರಾಜ್ ತಾರೀಖು ಲಾಗಾಯತು ಮೂರುದಿನಗಳೊಳಗಾಗಿ ದರಖಾಸ್ತು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ನಗರ್‌ಡಿವೀರ್ಜನಲ್ಲಿ ಉತ್ಪತ್ತಿಯಾದ ಬಾಬತು ಈ ಕೆಳಗೆ ಕಂಡ ಸಾಗುವಾನೀ ಮ ಇತರ ಜಾತೀ ದಿಮ್ಮೀಗಳು ಯಿದರಡಿ ವಿವರಿಸಲ್ಪಟ್ಟ ತಾರೀಖು ಮ ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ತಾರೀಖು ವ ಸ್ಥಳದ ಹೆಸರು.	ಸಾಗುವಾನೀ	ಬೀಟೀವರ.	ಕಾಡುಮರ.	ತ್ಯಾಗದ ಕೂ ಜಿಗಳು.	ಕಾಡುಮರ	ಜುಮ್ಲಾ.
1ನೇ ಫಿಬ್ರವರೀ 1876, ಆಯನೂರು ಡಿಪೋ ಶಿವಮೊಗ್ಗಾ ತಾಲ್ಲೂಕು.	465	60	433	270	110	1,338

ಹರಾಜ್ ನಿಬಂಧನೆ—1873ನೇ ಜೂ॥ 12ನೇ ಮತ್ತು ಂ 20ನೇ ನಂಬರ್ ಬಾಬತು ಮೈಸೂರು ಗೆಜೆಟ್ ಇಸ್ತಿಹಾರ್‌ನಾಮೇ ಅನುಸರಿಸಿ ಶಿವಮೊಗ್ಗಾ ತಾಲ್ಲೂಕು ಟ್ರೈಜರೀಯಲ್ಲಿ ಮೊಬಲಗ್ ಪೂರತೀ ಮಾಡತಕ್ಕದ್ದಲ್ಲದೆ ದರಖಾಸ್ತು ಮೊಬಲಗ್ ಪೈಕೀ ಶೇಕಡಾ ಇಪ್ಪತ್ತೈದರ ಮೇರೆ ಸದರೀ ಟ್ರೈಜರೀಯಲ್ಲಿ ಪೂರತೀ ಮಾಡಿ ಪಡದುಕ್ಕೊಂಡ ರಸೀದಿಯನ್ನು ಹರಾಜ್ ತಾರೀಖು ಲಾಗಾಯತು 5ನೇ ದಿನ ಪೂರೈಸಲಿಕ್ಕೆ ಮುಂಚಿತವಾಗಿಯೇ ಹರಾಜ್ ನಡಿಸುವ ಆಫಿಸರರಲ್ಲಿ ಹಾಜರ್ ಮಾಡತಕ್ಕದ್ದು. ಷರತ್ತಿಗೆ ತಪ್ಪಿದವರ ಬಾಬತು ನಾಪುಗಳನ್ನು ಪುನಶ್ಚ ವಿಕ್ರಯಿಸುವ ಬಗ್ಗೆ ಹರಾಜ್ ತಾರೀಖು ಲಾಗಾಯತು 6ನೇ ದಿನ ಡಿಪೋದಲ್ಲಿಯೇ ಯರಡನೆ ಹರಾಜ್ ನಡಿಸಲ್ಪಡುವದು.

ತಾರೀಖು 22ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ, ಸುಮಾರ್ 258 ಟ್ಯಗಳ ಬಾಬತು ನಂದಲ್ ಈ ಕೆಳಗೆ ಸಮೂದಿಸುವ ತಾರೀಖುಗಳ್ಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಸ್ನ 1876ನೇ ಇಸವಿ ಜನವರೀ 21ನೇ ಮತ್ತು ಂನಲ್ಲಿ ಹುಣಸೂರು ಕೋರ್ಟಿಯೊಳಗೆ 198¼ ಟ್ಯಗಳು.—ಬಗರ್ ಅದ್ದ್ ಐಬಗರ್, ಚಕ್ಕೆಗಳು, ಬುಕಣಿ, ನಾಕಾರೇವಗೈರೇ.

ಸ್ನ 1876ನೇ ಇಸವಿ ಜನವರೀ 24ನೇ ಮತ್ತು ಂನಲ್ಲಿ ಶ್ರೀರಂಗಪಟ್ಟಣದ ಕೋರ್ಟಿಯೊಳಗೆ 59¾ ಟ್ಯಗಳು.—ಬಗರ್ ಅದ್ದ್ ಐಬಗರ್, ಚಕ್ಕೆಗಳು, ಬುಕಣಿ, ನಾಕಾರೇ ವಗೈರೇ.

ಹರಾಜ್ ನಿಬಂಧನೆ,—ಕ್ರಯದ ಮೊಬಲಗ್ ಪೈಕೀ ಶೇಕಡೆ 25 ರೂಪಾಯಿಗಳು ಹರಾಜ್ ತಾರೀಖು ಲಾಗಾಯತು 3ನೇ ದಿವಸದೊಳಗಾಗಿ ಪೂರತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಸ್ನ 1876ನೇ ಇಸವಿ ಮಾರ್ಚೀ 26ನೇ ಮತ್ತು ಮಿಗೆ ವಳಗಾಗಿ ಸಲ್ಲಿಸತಕ್ಕದ್ದು. ವಿಕ್ರದರೋಬಸ್ತು ಷರತ್ತುಗಳು ಸ್ನ 1874ನೇ ಇಸವಿ ಡಿಸೆಂಬರ್ 5ನೇ ಮತ್ತು ಂ 48ನೇ ನಂಬರ್ ಮೈಸೂರ್ ಗೆಜೆಟ್‌ನಲ್ಲಿ ಪ್ರಾಯಿಷ್‌ಮಾಡಲ್ಪಟ್ಟ ಸ್ನ 1874ನೇ ನವೆಂರ್ 26ನೇ ಮತ್ತು ಂ 256ನೇ ನಂಬರ್ ಇಸ್ತಿಹಾರ್‌ನಾಮೇಯಲ್ಲಿ ವಿಧಿಸಲ್ಪಟ್ಟ ಪ್ರಕಾರ ಇರತಕ್ಕದ್ದು.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀಜ್ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೀಮರ	ಜಂಗ್ಲೀಮರ	ತೇಗದ ಕೂಚಗಳು	ಜಂಗ್ಲೀಮರದ ಕೂಚಗಳು	ಜುಮ್ಲಾ.
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿಕಾರಿಪುರದ ಡಿಪೋ	15ನೇ ಮಾರ್ಚೀ 1876.	959	633	408	265	57	2,322
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿವಾಳ ಕೊಪ್ಪದ ಡಿಪೋ	25ನೇ ಮಾರ್ಚೀ 1876.	129	162	574	37	43	945
ಜುಮ್ಲಾ.		1,088	795	982	302	100	3,267

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂ್ 12ನೇ ಮತ್ತು ಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ಪ್ರಕಾರ.

ಶಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು. ಖರೀದಿ ಮೊಬಲಗಿನಲ್ಲಿ ಕೀಕಡ 25 ರೂ ಪಾಯಿ ಪ್ರಕಾರ ಐರ್ಜ ಖಜಾನೇಯಲ್ಲಿ ಪಾವತೀನೂಡಿ ಆಬಗ್ಯೆ ಪಡೆದ ರೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯಾರನೇ ಹರಾಜ್ ನಡಿಸಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

KOLAR DISTRICT.

ತಾರೀಖು 23ನೇ ಡಿಸಂಬರ್ 1875.

ಇದರಿಂದ ತಿಳಿಯಪಡಿಸುವದೇನಂದರೆ, ಸ್ ೧೮೬೨ರ ಲಾಗಾಯತು 1870ನೇ ಇಸವಿ ವರವಿಗೆ ಈ ಕೋರ್ಟು ಅರಿಜಿನಲ್ ವ ಅಪ್ಪೀಲ ಮೊಕದ್ದಮೆಗಳೊಳಗೂ, ಅಮಲ್ಜಾರೀ ವ ಯಿತರ ಮಿಸಲೀನಿಯಸ್ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ ಕ್ರಿಮಿನಲ್ ಮೊಕದ್ದಮೆಗಳೊಳಗೂ, ಮತ್ತು 1839ನೇ ಯಿಸವಿ ಲಾಗಾಯತು 1862ನೇ ಯಿಸವಿ ವರಿಗಿನ ಟಾಬತು ಮಾಜೀ ಜದೀದ್ ಪ್ರಿನ್ಸಿಪಲ್ ಸದರ್ ಅಮೀನಿಗೆ ವ ಮಾಜೀ ಬೆಂಗಳೂರು ಡಿವೀಜನ್ ಸೂಪರ್ಟೆಂಡೆಂಟ್ ಈ ಕೋರ್ಟುಗಳಿಂದ ಬಂದ, ಕೆಲವು ಸಿವಿಲ್ ಮೊಕದ್ದಮೆಗಳೊಳಗೂ, ಕಕ್ಷಿಗಾರ್ರುಗಳಿಂದ ದಾಖಲ್ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ, ಸಾಧನಗಳೂ, ಲೆಕ್ಕಗಳೂ ವ ಯಿತರ ಕಾಗದಗಳೂ, ಹಳೆ ಜುಡಿಷಿಯಲ್ ರಿಕಾರ್ಡ್ಗಳನ್ನು ನಾಶಪಡಿಸತಕ್ಕ ಬಗ್ಯೆ ಯೇರ್ಪಟ್ಟ ರೂಲಸ್ ಅನುಸಾರವಾಗಿ ಸ್ ೧೮೭೬ನೇ ಯಿಸವಿ ಮಾರ್ಚಿ ಗುರ್ರೇತಾರೀಖಿನ ದಿನ ನಾಶಮಾಡಲ್ಪಡುವದು.

2. ಐರ್ಜ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ, ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತಾವೇಜುಗಳನ್ನಾಗಲಿ ವಾಪಸು ಪಡಿಯತಕ್ಕ ಖಾಯಿಷ್ ಉಳ್ಳ ಕಕ್ಷಿಗಾರರು ಮೇಲೆ ತಿಳಿಸಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಈ ಕೋರ್ಟಿಗೆ ಕೋರ್ಟ್ ದಿನಗಳಲ್ಲಿ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆವರಿಗೆ ಅರ್ಜೀ ಬರದುಕ್ಕೊಳ್ಳತಕ್ಕದ್ದು.

Descriptive roll of an escaped convict from the District Jail.

ಸ್ ೧೮೭೫ನೇ ಇಸವಿ ಡಿಸೆಂಬರ್ 23ನೇ ಮತ್ತು ಂ ಬ್ಯೆಗ್ಯೆ ಸುಮಾರು 11 ಘಂಟೆ ವೇಳೆ ಕೋಲಾರ ಜೈಲ್ ತೋಟದಿಂದ ಪರಾರಿಯಾದ ಕೈದಿ ಬಾಬಿಗನ ಚಹರೇ ಪಟ್ಟಿ.

ಹೆಸರು ಬಾಬಿಗ, ತಂದೆ ಹೆಸರು ಅಡಿಯನ್ನ, ಜಾತಿ ಮತ್ತು ಕಸಬು, ತೆಲಗುಬಣಜಿಗರವ ವ್ಯವಸಾಯ, ವಾಸಸ್ಥಳ ಹರ್ಮೇಜಸ್ಟ್ರೇಟೆಮೆ, ಬಳ್ಳಾರಿ ಡಿಸ್ಟ್ರಿಕ್ಟು, ಹಿಂದುಪುರ ತಾಲ್ಲೂಕು ಮ್ಯಾದೇವರಪಲ್ಲಿ, ಎತ್ತರ ಮತ್ಯಾವದಾದರು ಮುಖ್ಯವಾದ ಗುರುತಾಯಿವುಗಳ ದೇಖಿಲೆ ಚಹರೆ, ಯಣಗೆಂಪು, ತೆಳ್ಳಗಿದ್ದಾನೆ, ಎತ್ತರ 5 ಅಡಿ, 5 ಅಂಗುಲ, ಗುಂಡುಮುಖ, ಸುಮಾರು ವಯಸ್ಸು 30 ವರುಷ, ಕಾಲುಗಳ ಮೇಲೆ ಖಜ್ಜಿಯ ಕಲೆಗಳು, ಸ್ವಲ್ಪ ಬಗ್ಗಿದ್ದಾನೆ, ತಳ್ಳಗೆ ವಿಾನೆ ಬಿಟ್ಟಿದ್ದಾನೆ, ಯಾವ ವಿಧವಾದ ಸಜಾ ಆದದ್ದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ, ಕೋಲಾರ ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಕ್ರಿಮಿನಲ್ ನಂಬರ್ 33ನೇ ಮೊಕದ್ದಮೆಯಲ್ಲಿ ಚೋರಿಗಾಗಿ ಇಂಡಿಯನ್ ಪೆನಲ್ಕೋಡ್ 392ನೇ ಸೆಕ್ಷನ್ ಮೇರಿಗೆ, ಮೂರು ವರುಷಗಳ ಕಠಿಣ ಸಜಾ, ತಾರೀಖು 26ನೇ ನವಂಬರ್ 1875, ತಪ್ಪಿಸಿಕೊಂಡ ತಾರೀಖು, 23ನೇ ಡಿಸೆಂಬರ್ 1875. ಪರಾ, ಈ ಕೈದಿಯು ಸದರೀ ಜೈಲ್ ತೋಟದಲ್ಲಿ ಕೆಲಸ ಮಾಡುತ್ತಿರುವಾಗ್ಯೆ ಅವನ ಕುಡುತ ಮತ್ತು ಅವನ ಬಲಗಾಲಿನ ಕಬ್ಬಿಣದ ಬೇಡಿ ಇವುಗಳನ್ನು ಬಿಟ್ಟು ಪರಾರಿಯಾಗಿದ್ದಾನೆ, ಪರಾರಿಯಾಗುವ ವೇಳೆ ಬಿಳೀ ಚಡ್ಡಿ, ಕುಲಾವಿ ಮತ್ತು ಕಂಬಳಿ ಹೊದಿದ್ದನು ಮತ್ತು ವಂದುಕಾಲಿನಲ್ಲಿ ಉಂಗ್ರ, ಸರಪಣೀ ಸಹಾ ಯಿತ್ತು

B. KRISHNAIENGAR,
Dy. Commr. & Magistrate.